ಫ್ಯಾಕ್ಸ್ : 0816-2255761
ದೂರವಾಣಿ : 2272280

# ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ

ಬೆಳಗುಂಬ ರಸ್ತೆ, ತುಮಕೂರು – 572 103

## ಅಂತಿಮ ವಿನ್ಯಾಸ ಅನುಮೋದನೆ ಆದೇಶ

**ವಿಷಯ** : ತುಮಕೂರು ನಗರದ **ಕ್ಯಾತ್ಸಂದ್ರ** ಗ್ರಾಮದ ಸರ್ವೆ ನಂಬರ್ **50/2ಎ2** ರಲ್ಲಿ **ಒಟ್ಟು 0-20 ಗುಂಟೆ** ಪ್ರದೇಶಕ್ಕೆ ವಾಸದ ಉಪಯೋಗಕ್ಕೆ ಅಂತಿಮ ವಿನ್ಯಾಸ ನಕ್ಷೆ ಅನುಮೋದನೆ ಕೋರಿರುವ ಬಗ್ಗೆ.

**ಉಲ್ಲೇಖ** :
1. ಶ್ರೀ ಟಿ.ಆರ್.ಮಹೇಶ್ವರಪ್ಪ ಇವರ ಮನವಿ ದಿನಾಂಕ **08-07-2009**
2. ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿಯ ಆದೇಶ ಸಂಖ್ಯೆ **ಎಎಲ್‌ಎನ್(ಟಿಎಂಕೆ)/ ಸಿಆರ್/27/2008-09 ದಿನಾಂಕ 01-07-2009**
3. ದಿನಾಂಕ **18-08-2009** ರ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ **19** ರ ನಿರ್ಣಯ
4. ಪ್ರಾಧಿಕಾರಕ್ಕೆ ಪರಿಶೀಲನಾ ಶುಲ್ಕ, ಉತ್ತಮತೆ ಶುಲ್ಕ, ಉದ್ಯಾನವನ ಹಾಗೂ ಸಿ.ಎ.ವಿನಾಯ್ತಿ ಮತ್ತು ಲೈಸೆನ್ಸ್ ಶುಲ್ಕ ಪಾವತಿಸಿದ ರಸೀದಿ ಸಂಖ್ಯೆ **19043 ರೂ.4,55,075** (ನಾಲ್ಕು ಲಕ್ಷದ ಐವತ್ತೈದು ಸಾವಿರದ ಎಪ್ಪತ್ತೈದು ರೂಪಾಯಿಗಳು ಮಾತ್ರ) ದಿನಾಂಕ **13-11-2009** ಮತ್ತು ಮೇಲ್ವಿಚಾರಣಾ ಶುಲ್ಕ ಪಾವತಿಸಿದ ರಸೀದಿ ಸಂಖ್ಯೆ **19586 ರೂ.33,600** (ಮೂವತ್ತಮೂರು ಸಾವಿರದ ಆರು ನೂರು ರೂಪಾಯಿಗಳು ಮಾತ್ರ)
5. **ಈ** ಕಛೇರಿಯ ಪ್ರಾಥಮಿಕ ಅನುಮೋದನೆ ಆದೇಶ ಸಂಖ್ಯೆ ಟಿಯುಡಿಎ/ ಎಲ್‌ಎಒ/59/2008-09 ದಿನಾಂಕ 17-12-2009
6. ಪ್ರಾಥಮಿಕ ಅನುಮೋದನೆ ವಿನ್ಯಾಸ ನಕ್ಷೆಯಂತೆ ಅಭಿವೃದ್ಧಿ ಕಾರ್ಯಗಳನ್ನು ಪೂರ್ಣಗೊಳಿಸಿರುವ ಬಗ್ಗೆ ತಾಂತ್ರಿಕ ವಿಭಾಗದ ದೃಢೀಕರಣ ದಿನಾಂಕ 15-11-2012
7. ದಿನಾಂಕ **20-11-2012** ರ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ **49** ರ ನಿರ್ಣಯ
8. ರಸ್ತೆಗಳ ಪ್ರದೇಶವನ್ನು ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸಿ ನೊಂದಾಯಿಸಿ ಕೊಟ್ಟಿರುವ ದಾನಪತ್ರದ ದಸ್ತಾವೇಜು ನಂ.**10019/13-14** ದಿನಾಂಕ **26-10-2013**
9. ಸರ್ಕಾರದ ಸುತ್ತೋಲೆಯ ಸಂಖ್ಯೆ ನಅಇ / 112 / ಬೆಂರೂಪ್ರಾ / 2005 ದಿನಾಂಕ 26-05-2005

* * * * *

**ಪ್ರಸ್ತಾವನೆ :-**

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರಲ್ಲಿನ ಅರ್ಜಿದಾರರ ಮನವಿಯಲ್ಲಿ ತುಮಕೂರು ನಗರದ **ಕ್ಯಾತ್ಸಂದ್ರ** ಗ್ರಾಮದ ಸರ್ವೆ ನಂಬರ್ **50/2ಎ2** ರಲ್ಲಿ **ಒಟ್ಟು 0-20 ಗುಂಟೆ** ಪ್ರದೇಶಕ್ಕೆ ವಸತಿ ವಿನ್ಯಾಸ ನಕ್ಷೆಯನ್ನು ಅನುಮೋದಿಸಲು ಕೋರಲಾಗಿದೆ.

ಉಲ್ಲೇಖ (3) ರ ನಿರ್ಣಯದಂತೆ, ಉಲ್ಲೇಖ (4) ರಲ್ಲಿ ಅರ್ಜಿದಾರರು ಶುಲ್ಕ ಪಾವತಿಸಿರುತ್ತಾರೆ. ಉಲ್ಲೇಖ (5) ರಲ್ಲಿ ಪ್ರಸ್ತಾವಿತ ಪ್ರದೇಶಕ್ಕೆ ಪ್ರಾಧಿಕಾರದಿಂದ ಪ್ರಾಥಮಿಕ ಅನುಮೋದನೆ ವಿನ್ಯಾಸ ನಕ್ಷೆ ತಯಾರಿಸಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಶೇಕಡ 60 ರಷ್ಟು ನಿವೇಶನಗಳನ್ನು ಮಾರಟಕ್ಕೆ ಬಿಡುಗಡೆ ಮಾಡಲಾಗಿತ್ತು. ಉಲ್ಲೇಖ (6) ರ ತಾಂತ್ರಿಕ ಶಾಖೆಯ ವರದಿಯಂತೆ ಬಡಾವಣೆಯಲ್ಲಿ ಡಾಂಬರೀಕರಣ, ಸಿವಿಲ್ ಅಭಿವೃದ್ಧಿ ಕೆಲಸಗಳು, ನೀರು ಸರಬರಾಜು ವ್ಯವಸ್ಥೆ, ಒಳಚರಂಡಿ ವ್ಯವಸ್ಥೆ, ವಿದ್ಯುತ್ ವ್ಯವಸ್ಥೆ ಮುಂತಾದ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲಾಗಿರುತ್ತದೆ.

ಉಲ್ಲಖ (7) ರ ಪ್ರಾಧಿಕಾರದ ಸಭೆಯ ನಿರ್ಣಯದಂತೆ, ಉಲ್ಲೇಖ (8) ರಲ್ಲಿ ರಸ್ತೆಗಳ ಪ್ರದೇಶವನ್ನು ದಾನಪತ್ರದ ಮೂಲಕ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು ಇವರಿಗೆ ಹಸ್ತಾಂತರಿಸಲಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17(2) ರನ್ವಯ ಹಾಗೂ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 34 ರಂತೆ ಅನುಮೋದಿಸಬಹುದಾಗಿರುತ್ತದೆ. ಉಲ್ಲೇಖ (9) ರ ಸರ್ಕಾರದ ಸುತ್ತೋಲೆಯಂತೆ ವಿನ್ಯಾಸದ ಶೇಕಡ 60 ರಷ್ಟು ನಿವೇಶನಗಳು ಅಂದರೆ 01, 02, 03, 08, 09, 10 ಮತ್ತು 11 ಒಟ್ಟು 07 ನಿವೇಶನಗಳನ್ನು ಉಲ್ಲೇಖ (5) ರ ಪ್ರಾಧಿಕಾರದ ಆದೇಶದಂತೆ ಬಿಡುಗಡೆಗೊಳಿಸಲಾಗಿತ್ತು. ಉಳಿದ ಶೇಕಡ 40 ರಷ್ಟು ನಿವೇಶನಗಳು ಅಂದರೆ 04, 05, 06 ಮತ್ತು 07 ಒಟ್ಟು 04 ನಿವೇಶನಗಳನ್ನು ಬಿಡುಗಡೆಗೊಳಿಸಿ ಅಂತಿಮ ವಿನ್ಯಾಸ ಅನುಮೋದನೆಯಾಗಬೇಕಾಗಿದ್ದು, ಕೆಳಕಂಡಂತೆ ಆದೇಶಿಸಿದೆ.

ನಗರಾಭಿವೃದ್ಧಿ ಪ್ರಾಧಿಕಾರ ಕಛೇರಿ,
ಬೆಳಗುಂಬ ರಸ್ತೆ, ತುಮಕೂರು.

ಸಂಖ್ಯೆ ತುನಪ್ರಾ/ನಯೋ/ವಿನ್ಯಾಸ/59/2008-09 3316
ಅಂತಿಮ ವಿನ್ಯಾಸ ನಕ್ಷೆ ದೃಢೀಕರಣ

ದಿನಾಂಕ : 7-2-2014
ದಿನಾಂಕ :

# ಆದೇಶ

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರದ ಸುತ್ತೋಲೆಯ ಸಂಖ್ಯೆ ನಅಇ / 112 / ಬೆಂರೂಪ್ರಾ / 2005 ದಿನಾಂಕ 26-05-2005 ರಂತೆ ತುಮಕೂರು ನಗರದ **ಕ್ಯಾತ್ಸಂದ್ರ** ಗ್ರಾಮದ ಸರ್ವೆ ನಂಬರ್ **50/2ಎ2** ರಲ್ಲಿ **ಒಟ್ಟು 0-20 ಗುಂಟೆ** ಪ್ರದೇಶದಲ್ಲಿ ರಚಿಸಲಾಗಿರುವ ವಸತಿ ಉದ್ದೇಶದ ವಿನ್ಯಾಸವನ್ನು ಅಂತಿಮವಾಗಿ ಅನುಮೋದಿಸಿದೆ. ಈ ವಿನ್ಯಾಸದಲ್ಲಿನ ಶೇಕಡ 40 ರಷ್ಟು ನಿವೇಶನಗಳ ಸಂಖ್ಯೆ ಅಂದರೆ 04, 05, 06 ಮತ್ತು 07 ಒಟ್ಟು 04 ನಿವೇಶನಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಈ ಅಂತಿಮ ವಿನ್ಯಾಸ ಅನುಮೋದನೆ ಮತ್ತು ನಿವೇಶನ ಬಿಡುಗಡೆಯು ಈ ಕೆಳಕಂಡ ಷರತ್ತಿಗೊಳಪಟ್ಟಿರುತ್ತದೆ.

**ನಿಂಬಧನೆಗಳು:-**

1. ವಿನ್ಯಾಸದಲ್ಲಿನ ನಿವೇಶನಗಳನ್ನು ಅನುಮೋದಿಸಲಾದ ಉದ್ದೇಶಕ್ಕೆ ಉಪಯೋಗಿಸತಕ್ಕದ್ದು. ನಿವೇಶನಗಳನ್ನು ಉಪವಿಭಜಿಸುವುದು / ಒಟ್ಟು ಗೂಡಿಸುವುದನ್ನು, ಅಳತೆಗಳನ್ನು ಮಾರ್ಪಾಡು ಮಾಡುವುದನ್ನಾಗಲೀ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೇ ಮಾಡತಕ್ಕದ್ದಲ್ಲ.
2. ವಿನ್ಯಾಸದಲ್ಲಿ ವಸತಿಗಾಗಿ **1371.28** ಚ.ಮೀ. (ಶೇಕಡ **67.77**); ರಸ್ತೆಗಳಿಗೆ **652.19** ಚ.ಮೀ. (ಶೇಕಡ **32.23)** ಪ್ರದೇಶ ನಿಗಧಿಪಡಿಸಿದೆ. ವಸತಿ ವಿಸ್ತೀರ್ಣದಲ್ಲಿ ಅನುಮೋದಿತ ನಕ್ಷೆಯಲ್ಲಿ ತೋರಿಸಿರುವಂತೆ ಅನಿಯಮಿತ ಅಳತೆಯ **05** ನಿವೇಶನಗಳಿರುತ್ತವೆ.
3. ನಿವೇಶನಗಳಲ್ಲಿ ಕಟ್ಟಡ ನಿರ್ಮಾಣಕ್ಕೆ ಮೊದಲು ಸ್ಥಳೀಯ ಸಂಸ್ಥೆಯಿಂದ ಅಗತ್ಯ ಕಟ್ಟಡ ಪರವಾನಗಿ / ಪ್ರಾರಂಭಿಕ ಪ್ರಮಾಣ ಪತ್ರ ಪಡೆದು ಅನುಮೋದಿತ ಕಟ್ಟಡ ನಕ್ಷೆಯಂತೆಯೇ ಕಟ್ಟಡ ನಿರ್ಮಿಸತಕ್ಕದ್ದು.

4. ಮೇಲ್ಕಂಡ ಯಾವುದೇ ನಿಬಂಧನೆಯನ್ನಾದರೂ ಪಾಲಿಸದೇ ಇದ್ದಲ್ಲಿ; ನೀಡಲಾದ ಮಾಹಿತಿ / ದಾಖಲಾತಿ ತಪ್ಪು ಎಂದು ಕಂಡು ಬಂದಲ್ಲಿ ವಿನ್ಯಾಸವನ್ನು ಯಾವುದೇ ತಿಳುವಳಿಕೆ ನೀಡದೇ ರದ್ದುಪಡಿಸುವ ಅಥವಾ ಇತರೇ ಯಾವುದೇ ನಿಬಂಧನೆ ವಿಧಿಸುವ ಅಧಿಕಾರ ಪ್ರಾಧಿಕಾರಕ್ಕೆ ಇರುತ್ತದೆ.
5. ವಿನ್ಯಾಸ ಪ್ರದೇಶದ ಗಡಿಗಳು, ನಿವೇಶನದ ಗಡಿಗಳಿಗೆ ಸಂಬಂಧಿಸಿದಂತೆ ಯಾವುದೇ ತಂಟೆ ತಕರಾರು ಉಂಟಾದಲ್ಲಿ ವಿನ್ಯಾಸ/ನಿವೇಶನ ಮಾಲೀಕರೇ ತಮ್ಮ ಸ್ವಂತ ಜವಾಬ್ದಾರಿಯಲ್ಲಿ ಬಗೆಹರಿಸಿಕೊಳ್ಳತಕ್ಕದ್ದು ಹಾಗೂ ಈ ಅನುಮತಿಯ ಸಿವಿಲ್ ವ್ಯಾಜ್ಯಗಳಿಗೆ ಹೊರತಾಗಿದೆ.
6. ಈ ಅನುಮೋದನೆಯು ತಾಂತ್ರಿಕವಾಗಿರುವುದರಿಂದ, ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಮತ್ತು ಉಪಯೋಗಿಸಲು ಬರುವುದಿಲ್ಲ.
7. ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಜವಾಬ್ದಾರಿಯಾಗುವುದಿಲ್ಲ.
8. ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ವಿನ್ಯಾಸಕ್ಕೆ ನೀಡಿರುವ ಅಂಗೀಕಾರ ತಾನೆ ರದ್ದುಗೊಳ್ಳುತ್ತದೆ ಮತ್ತು ಸಂಬಂಧಿಸಿದವರ ವಿರುದ್ಧ ಕಾನೂನು ಕ್ರಮಕ್ಕೈಗೊಳ್ಳಲಾಗುವುದು.

23/1/2014

ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ,
ತುಮಕೂರು.

**ಶ್ರೀ ಟಿ.ಆರ್.ಮಹೇಶ್ವರಪ್ಪ**
**ಶ್ರೀ ಹೆಚ್.ಬಿ.ಪ್ರಕಾಶ್**
**ಶ್ರೀ ಬಿ.ಜಿ.ನಟರಾಜ**
**ಶ್ರೀ ಕೆ.ಆರ್.ವಿಶ್ವನಾಥ ವಿದ್ಯಾಧರ**
ಸಿದ್ದರಾಮೇಶ್ವರ ಬಡಾವಣೆ,
ತುಮಕೂರು.

**ಪ್ರತಿಯನ್ನು** :-
1. ಪೌರಾಯುಕ್ತರು, ನಗರಸಭೆ, ತುಮಕೂರು ಇವರಿಗೆ ವಿನ್ಯಾಸ ನಕ್ಷೆಯೊಂದಿಗೆ ರವಾನಿಸುತ್ತಾ ವಿನ್ಯಾಸದ ನಕ್ಷೆಯಂತೆ ನಿಯಮಾನುಸಾರ ನಿವೇಶನಗಳ ಖಾತಾ ಮಾಡಬಹುದು ಹಾಗೂ ಕಟ್ಟಡ ನಿರ್ಮಾಣಕ್ಕೆ ಅನುಮತಿಸಬಹುದೆಂದು ತಿಳಿಸಲಾಗಿದೆ.
2. ಉಪನೊಂದಣಾಧಿಕಾರಿಗಳು, ತುಮಕೂರು ತಾಲ್ಲೂಕು, ತುಮಕೂರು ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
3. ಕಛೇರಿ ಪ್ರತಿ.



**KEY PLAN**





| LAND YOUSE ANALYSIS | | | |
|---|---|---|---|
| SL NO | LAND USE | AREA IN Sq.M | PERCENTAGE |
| 1 | RESIDENTIAL | 1371.74 | 67.77 % |
| 2 | ROAD | 652.41 | 32.23 % |
| | TOTAL | 2024.15 | 100 % |

| SITE DETIALS | | |
|---|---|---|
| SL.NO | SITE DIMENSION | SITE NOS |
| 1 | 12.19X16.76 | 1 |
| 2 | (10.06+12.19) X13.41 | 2 |
| 3 | 10.06X13.71 | 3,4,5 |
| 4 | 9.14X12.19 | 6,7,8 |
| 5 | 9.14X13.43 | 9 |
| 6 | 7.62X10.67 | 10 |
| 7 | 7.62X10.97 | 11 |

SCALE =1:500

GOVERNMENT OF KARNATAKA
TUMKUR URBAN DEVELOPMENT AUTHORITY
TUMKUR

TOWN PLANNING MEMBER
T U D A
TUMKUR

COMMISSIONER
T U D A
TUMKUR

DRN BY | CKD BY | DRG NO

TITLE

**PROPOSED RESIDENTIAL LAY OUT PLAN AT SY NO 50/2A2 OF KYTHASANDRA TUMKUR KASABA, TUMKUR.**

EXTENT :00-20.00GTS

OWNER -